# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 17 ಸೇಶಿಕಾ 2021 (2)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:20.11.2021

## ಅಧಿಸೂಚನೆ

**ವಿಷಯ:-** ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಸಹಾಯಕ ಇಂಜಿನಿಯರ್- II ವೃಂದದ ಅಂತಿಮ ಜೇಷ್ಠತಾ ಪಟ್ಟಿ ದಿನಾಂಕ:10.08.2021 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

**ಉಲ್ಲೇಖ:-** ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 17 ಸೇಶಿಕಾ 2021(2), ದಿನಾಂಕ:07.09.2021

* * * *

ಉಲ್ಲೇಖಿತ ಅಧಿಸೂಚನೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಗೆ ಸೇರಿದ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಸಹಾಯಕ ಇಂಜಿನಿಯರ್- II ವೃಂದದ ಸೇವಾ ಜೇಷ್ಠತೆಯನ್ನು ನಿಗದಿಪಡಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಾಗುವ ಅಧಿಕಾರಿಗಳು ತಮ್ಮ ಆಕ್ಷೇಪಣೆ/ ಸಲಹೆ ಏನಾದರೂ ಇದ್ದಲ್ಲಿ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ 15 ದಿನಗಳ ಒಳಗಾಗಿ ಅಂತಹ ಆಕ್ಷೇಪಣೆ / ಸಲಹೆಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು.

ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಸಂಬಂಧವಾಗಿ ನಿಗದಿತ ಅವಧಿಯಲ್ಲಿ ಸ್ವೀಕೃತವಾಗಿರುವ ಎಲ್ಲಾ ಆಕ್ಷೇಪಣೆ/ ಸಲಹೆಗಳನ್ನು ಪರಿಶೀಲಿಸಲಾಗಿದ್ದು, ಈ ಅಧಿಸೂಚನೆಯ ಜೊತೆ ಲಗತ್ತಿಸಿರುವ ವಿವರಣಾ ಪಟ್ಟಿಯಲ್ಲಿ ಅವುಗಳನ್ನು ನಮೂದಿಸಿದೆ.

..2

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 09 ಸೇಶಿಕಾ 2020, ದಿ:08.12.2020 ರ ಅನುಬಂಧ (1) ರಲ್ಲಿ ಮೂಲತ: ಲೋಕೋಪಯೋಗಿ ಇಲಾಖೆಗೆ ಸೇರಿದ ಸಹಾಯಕ ಇಂಜಿನಿಯರ್ (ವಿಭಾಗ-2) ವೃಂದದ ಅಧಿಕಾರಿಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ಶಾಶ್ವತವಾಗಿ ವಿಲೀನಗೊಳಿಸಲಾಗಿದ್ದು, ಸದರಿಯವರುಗಳ ಸಹಾಯಕ ಇಂಜಿನಿಯರ್ ವೃಂದದ ಅರ್ಹತಾ ದಿನಾಂಕವನ್ನು ಪರಿಗಣಿಸಿ ಅವರನ್ನೂ ಒಳಗೊಂಡಂತೆ ಮೂಲತಃ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ (ವಿಭಾಗ-2) ಗಳ ಹೆಸರುಗಳನ್ನು ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಸಹಾಯಕ ಇಂಜಿನಿಯರ್- II ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿ:10.08.2021 ರಲ್ಲಿ ಇದ್ದಂತೆ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
20/11
**(ಕೆ. ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
20/11/2021

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ.

**ಪ್ರತಿಯನ್ನು**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ ಜಲ ಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ.

2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
4. ಮುಖ್ಯ ಕಾರ್ಯಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಬಿ ಮತ್ತು ಸಿ) / ಜಲಸಂಪನ್ಮೂಲ ಇಲಾಖೆ.
6. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
7. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ, ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

# ಸಹಾಯಕ ಇಂಜಿನಿಯರ್- II ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳು

| ಕ್ರ. ಸಂ | ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆ | ಆಕ್ಷೇಪಣೆಯ ಸ್ವರೂಪ | | ಆಕ್ಷೇಪಣೆಯನ್ನು ಪರಿಗಣಿಸುವುದಕ್ಕೆ/ ಪರಿಗಣಿಸದಿರುವುದಕ್ಕೆ ಕಾರಣಗಳು |
|---|---|---|---|---|
| 1. | 46 (ಉಳಿಕೆ ಮೂಲ ವೃಂದ) | ಅಬ್ದುಲ್ ಅಜೀಜ್, ಸಹಾಯಕ ಇಂಜಿನಿಯರ್- II | ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ನೇಮಕಗೊಂಡು ನಂತರ ಜಿಲ್ಲಾ ಪಂಚಾಯತ್ ಸೇವೆಯಲ್ಲಿ ವಿಲೀನಗೊಂಡು ನಂತರ ದಿ:04.10.2019ರ ಅಧಿಸೂಚನೆಯಂತೆ ಕಿರಿಯ ಇಂಜಿನಿಯರ್ ವೃಂದದಿಂದ ಸಹಾಯಕ ಇಂಜಿನಿಯರ್ ವೃಂದಕ್ಕೆ ಪದೋನ್ನತಿ ಹೊಂದಿದ್ದು, ತಮ್ಮ ಹಿಂದಿನ ಸೇವೆಯನ್ನು ಪರಿಗಣಿಸದೆ ಜೇಷ್ಠತೆಯಲ್ಲಿ ತಮ್ಮ ಜೇಷ್ಠತೆಯನ್ನು ಕೆಳ ಹಂತದಲ್ಲಿ ನಿಗದಿಪಡಿಸಲಾಗಿದೆ ಎಂದು ತಿಳಿಸುತ್ತಾ, ಈ ಕೆಳಕಂಡಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.<br><br>ಸರ್ಕಾರದ ದಿ:03.12.2013ರ ಆದೇಶದಲ್ಲಿ 49 ವಿಶೇಷ ದರ್ಜೆಯ (ಸ.ಇಂ.-2) ಹುದ್ದೆಗಳನ್ನು ಸೃಜಿಸಿ, ಸದರಿ ಹುದ್ದೆಗಳಿಗೆ 2001ರಲ್ಲಿ ಪ್ರಕಟಿಸಿದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಜಿಲ್ಲಾವಾರು ವಿಂಗಡಿಸಿ 143 ಸಹಾಯಕ ಇಂಜಿನಿಯರ್‌ಗಳ ಪೈಕಿ 49 ಕಿರಿಯ ಇಂಜಿನಿಯರ್‌ಗಳಿಗೆ (ವಿಶೇಷ ದರ್ಜೆ) ಹುದ್ದೆಗಳಿಗೆ ಪದೋನ್ನತಿ ನೀಡಿ ನಂತರ ಸದರಿಯವರುಗಳಿಗೆ ದಿನಾಂಕ:23.12.2011ರ ಅಧಿಸೂಚನೆಯಲ್ಲಿ ನಿಯಮ 32ರಡಿ ಸ.ಕಾ.ಇಂ. ಹುದ್ದೆಗೆ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದೆ. ಆದರೆ, | ದಿ: 07.09.2021 ರಲ್ಲಿ ಪ್ರಕಟಿಸಲಾಗಿರುವ ಸಹಾಯಕ ಇಂಜಿನಿಯರ್(ವಿಭಾಗ-2) ಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಿರುವ ಕ್ರ.ಸಂ. 01 ರಿಂದ 02 ರವರೆಗಿನ ಅಧಿಕಾರಿಗಳು ಈ ಹಿಂದೆ ಡಿಆರ್‌ಡಿಎಸ್ ಹಾಗೂ ಟಿಡಿಬಿ ಗಳಲ್ಲಿ ನೇಮಕಗೊಂಡು ನಂತರ ಜಿಲ್ಲಾ ಪಂಚಾಯತ್ ಸೇವೆಗಳಲ್ಲಿ ಮುಂದುವರೆದು ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 205 ಸೇಶಿಕಾ 2014, ದಿನಾಂಕ:09.05.2017ರಲ್ಲಿ ರಚಿಸಲಾದ ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಗಳು (ಹಿಂದಿನ ಡಿಆರ್ ಡಿಎಸ್ ಟಿ.ಡಿ.ಬಿ ಮತ್ತು ಜಿಲ್ಲಾ ಪರಿಷತ್ ನೌಕರರ ವಿಲೀನಾತಿ) (ವಿಶೇಷ) ನಿಯಮಗಳು 2016 ರಂತೆ ಪಂ.ರಾ.ಇಂ. ಇಲಾಖೆಯಲ್ಲಿ ವಿಲೀನಗೊಂಡ ಕಿರಿಯ ಇಂಜಿನಿಯರ್ ಗಳಾಗಿದ್ದಾರೆ. ಅದನ್ನು ಆಧರಿಸಿ ಸದರಿಯವರುಗಳ ಜೇಷ್ಠತೆಯನ್ನು ದಿ: 17.08.209ರಲ್ಲಿ ಪ್ರಕಟಿಸಿ ನಂತರ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 111 ಸೇಶಿಕಾ 2019, ದಿನಾಂಕ: 04.10.2019 ರಲ್ಲಿ ಕಿರಿಯ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಇಂಜಿನಿಯರ್ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ. |
| 2. | 60 (ಉಳಿಕೆ ಮೂಲ ವೃಂದ) | ಎಂ.ಎ.ಅಜೀಮ್, ಸಹಾಯಕ ಇಂಜಿನಿಯರ್- II | | |

VAC

| | | | | |
|---|---|---|---|---|
| | | | ಸದರಿಯವರು ಗಳೊಂದಿಗೆ ಸಕ್ರಮಾತಿ ಹೊಂದಿದ ತಮಗೆ 2019ರಲ್ಲಿ ಸ.ಇಂ. ಹುದ್ದೆಯಲ್ಲಿ ಪದೋನ್ನತಿ ನೀಡಿರುವುದರಿಂದ ಸ.ಕಾ.ಇಂ. ಹುದ್ದೆಯಲ್ಲಿ ಪದೋನ್ನತಿ ಹೊಂದಲು ತಮಗೆ ಅನ್ಯಾಯ ವಾಗಿರುತ್ತದೆ. ಆದ್ದರಿಂದ ತಮಗೆ ಸ.ಇಂ. ಹುದ್ದೆಯಲ್ಲಿ ಪದೋನ್ನತಿ ನೀಡಿದ ಆದೇಶವನ್ನು ಮಾರ್ಪಡಿಸಿ 2010 ರಿಂದ ಪೂರ್ವಾನ್ವಯವಾಗುವಂತೆ ಜೇಷ್ಠತೆಯಲ್ಲಿ ಮೇಲಿನ ಕ್ರಮಾಂಕದಲ್ಲಿ ತಮ್ಮ ಹೆಸರನ್ನು ಸೇರಿಸುವಂತೆ ಹಾಗೂ ಬೇರೆ ಇಲಾಖೆಯಿಂದ ವಿಲೀನಗೊಂಡ ಇಂಜಿನಿಯರ್‌ಗಳ ಜೇಷ್ಠತೆ ಯನ್ನು ತಮ್ಮ ಜೇಷ್ಠತಾ ಕ್ರಮಾಂಕದ ನಂತರ ಕೆಳ ಕ್ರಮಾಂಕದಲ್ಲಿ ನಿಗದಿಪಡಿಸುವಂತೆ ಆಕ್ಷೇಪಿಸುತ್ತಾ, ತಾವು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ತಮ್ಮ ಹೆಸರನ್ನು ಸೇರ್ಪಡೆ ಮಾಡುವಂತೆ ಸಂಬಂಧಿಸಿದ ದಾಖಲೆಗಳೊಂದಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. | ಸದರಿಯವರುಗಳಿಗೆ ಸಹಾಯಕ ಇಂಜಿನಿಯರ್ ಹುದ್ದೆಗೆ ಮುಂಬಡ್ತಿ ನೀಡಿದ ದಿನಾಂಕವನ್ನು ಆಧರಿಸಿ ಸದರಿಯವರ ಜೇಷ್ಠತೆಯನ್ನು ಸಹಾಯಕ ಇಂಜಿನಿಯರ್ (ವಿಭಾಗ-2) ವೃಂದದಲ್ಲಿ ನಿಗದಿಪಡಿಸಲಾಗಿರುತ್ತದೆ. ಕಿರಿಯ ಇಂಜಿನಿಯರ್ ವೃಂದದಲ್ಲಿ ಸೇವೆ ಸಲ್ಲಿಸಿದ ಮಾತ್ರಕ್ಕೆ ಅವರುಗಳಿಗೆ ಪೂರ್ವಾನ್ವಯವಾಗಿ ಮುಂಬಡ್ತಿಯನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಸದರಿಯವರುಗಳ ಕೋರಿಕೆ ಅನುಸಾರ ಉಳಿಕೆ ಮೂಲ ವೃಂದದಲ್ಲಿ ಅವರ ಹೆಸರುಗಳನ್ನು ಕೈಬಿಟ್ಟು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಜೇಷ್ಠತೆಯನ್ನು ಕ್ರಮವಾಗಿ ಅಬ್ದುಲ್ ಅಜೀಜ್- ಜೇ.ಕ್ರ.ಸಂ:12 ರಲ್ಲಿ ಹಾಗೂ ಎಂ.ಎ.ಅಜೀಮ್- ಜೇ.ಕ್ರ.ಸಂ.13 ರಲ್ಲಿ ನಿಗಧಿಪಡಿಸಿದೆ. |
| 3. | 37 (ಉಳಿಕೆ ಮೂಲ ವೃಂದ) | ಶಿವಬಸಪ್ಪ ಕಾಳಶೆಟ್ಟಿ, ಸಹಾಯಕ ಇಂಜಿನಿಯರ್- II | ತಮ್ಮ ಹೆಸರನ್ನು ಸಹಾಯಕ ಇಂಜಿನಿಯರ್-ವಿಭಾಗ-2 ವೃಂದದ ಉಳಿಕೆ ಮೂಲ ವೃಂದದಲ್ಲಿ ಸೇರ್ಪಡೆ ಮಾಡಲಾಗಿದ್ದು, ಈಗಾಗಲೇ ತಾವು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಸೇರ್ಪಡೆ ಮಾಡುವಂತೆ ಕೋರಿ ಸೂಕ್ತ ದಾಖಲೆಗಳನ್ನು ಸಹ ಸಲ್ಲಿಸಿರುವುದರಿಂದ ತಮ್ಮ ಹೆಸರನ್ನು ಉಳಿಕೆ ಮೂಲವೃಂದದಿಂದ ಕೈಬಿಟ್ಟು ಕಲ್ಯಾಣ ಕರ್ನಾಟಕ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ. | ಸದರಿಯವರ ಕೋರಿಕೆ ಹಾಗೂ ದಾಖಲೆಗಳನ್ನು ಪರಿಗಣಿಸಿ ಅವರ ಹೆಸರನ್ನು ಉಳಿಕೆ ಮೂಲ ವೃಂದದಲ್ಲಿ ಕೈಬಿಟ್ಟು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಜೇಷ್ಠತೆಯನ್ನು ಜೇ.ಕ್ರ.ಸಂ. 6 ರಲ್ಲಿ ನಿಗಧಿಪಡಿಸಿದೆ. |

| | | | | |
|---|---|---|---|---|
| 4. | 79 (ಉಳಿಕೆ ಮೂಲ ವೃಂದ) | ಮೊಹಮ್ಮದ್ ಕಲೀಮುದ್ದೀನ್, ಸಹಾಯಕ ಇಂಜಿನಿಯರ್- II | ದಿನಾಂಕ:07.09.2021 ರಂದು ಪ್ರಕಟಿಸಲಾಗಿ ರುವ ಸಹಾಯಕ ಇಂಜಿನಿಯರ್, ವಿಭಾಗ-2ರ ತಾತ್ಕಾಲಿಕ ಉಳಿಕೆ ಮೂಲವೃಂದದ ಜೇಷ್ಠತಾ ಪಟ್ಟಿಯಲ್ಲಿ ಕ್ರ.ಸಂ.79 & 83 ರಲ್ಲಿ ತಮ್ಮಗಳ ಹೆಸರಿದ್ದು, ಯಾವುದೇ ಮಾಹಿತಿ ಲಭ್ಯವಿಲ್ಲವೆಂದು ಪ್ರಕಟಿಸಲಾಗಿದೆ. ಆದರೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ ಇವರು ತಮ್ಮಗಳ ಜೇಷ್ಠತೆಯನ್ನು ನಿಗದಿಪಡಿಸಿರುವುದಾಗಿ ತಿಳಿಸುತ್ತಾ ಸದರಿ ಜೇಷ್ಠತೆಯನ್ವಯ ತಾವುಗಳು ಈಗಾಗಲೇ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಸೇರ್ಪಡೆಗೊಳ್ಳಲು ಮನವಿ ಸಲ್ಲಿಸಿದ್ದು, ಆದರಂತೆ, ತಮ್ಮಗಳ ಜೇಷ್ಠತೆಯನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಸೇರ್ಪಡೆ ಮಾಡುವಂತೆ ಕೋರಿ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿರುತ್ತಾರೆ. | ಸಹಾಯಕ ಇಂಜಿನಿಯರ್ (ವಿಭಾಗ-2)ಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿ: 07.09.2021 ರಂದು ಪ್ರಕಟಿಸುವ ಪೂರ್ವದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಬೆಂಗಳೂರು ಇವರು ಪತ್ರ ದಿ:09.02.2021ರಲ್ಲಿ ಸಹಾಯಕ ಇಂಜಿನಿಯರ್ (ವಿಭಾಗ-2) ವೃಂದದ ಅಂತರ್ ಜೇಷ್ಠತೆಯನ್ನು ಈ ಇಲಾಖೆಗೆ ನೀಡಿದ್ದು, ಅದರಲ್ಲಿ ಸದರಿಯವರುಗಳ ಹೆಸರಿನ ಮುಂದೆ ಮಾಹಿತಿ ಲಭ್ಯವಿಲ್ಲವೆಂದು ತಿಳಿಸಿದ ಕಾರಣ ಜೇಷ್ಠತೆಯನ್ನು ನಿಗದಿಪಡಿಸಿರುವುದಿಲ್ಲ.<br><br>ಪ್ರಸ್ತುತ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು ಇವರು ದಿ:17.09.2021 ಹಾಗೂ 14.09.2021 ರಂದು ಸದರಿಯವರುಗಳ ಜೇಷ್ಠತೆಯನ್ನು ನಿಗಧಿಪಡಿಸಿ ಮಾಹಿತಿಯನ್ನು ನೀಡಿರುತ್ತಾರೆ.<br><br>ಹಾಗಾಗಿ ಸದರಿಯವರುಗಳ ಕೋರಿಕೆಯನುಸಾರ ಉಳಿಕೆ ಮೂಲ ವೃಂದದಲ್ಲಿ ಅವರ ಹೆಸರುಗಳನ್ನು ಕೈಬಿಟ್ಟು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಸದರಿಯವರುಗಳ ಜೇಷ್ಠತೆಯನ್ನು ಕ್ರಮವಾಗಿ ಮೊಹಮ್ಮದ್ ಕಲೀಮುದ್ದೀನ್- ಜೇ.ಕ್ರ.ಸಂ:02ರಲ್ಲಿ ಹಾಗೂ ಬಸವರಾಜಯ್ಯ ಹಿರೇಮಠ - ಜೇ.ಕ್ರ.ಸಂ.08ರಲ್ಲಿ ನಿಗಧಿಪಡಿಸಿದೆ. |
| 5. | 83 (ಉಳಿಕೆ ಮೂಲ ವೃಂದ) | ಬಸವರಾಜಯ್ಯ ಹಿರೇಮಠ, ಸಹಾಯಕ ಇಂಜಿನಿಯರ್- II | | |
| 6. | 8 | ಪೀರಾಜಿ, ಸಹಾಯಕ ಇಂಜಿನಿಯರ್- II | ದಿನಾಂಕ:07.09.2021 ರಂದು ಪ್ರಕಟಿಸಲಾಗಿರುವ ಸಹಾಯಕ ಇಂಜಿನಿಯರ್, ವಿಭಾಗ-2ರ ತಾತ್ಕಾಲಿಕ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಕ್ರ.ಸಂ.08 & 09ರಲ್ಲಿ ತಮ್ಮಗಳ ಹೆಸರಿದ್ದು, ಯಾವುದೇ ಮಾಹಿತಿ ಲಭ್ಯವಿಲ್ಲವೆಂದು ಪ್ರಕಟಿಸಲಾಗಿದೆ. ಆದರೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ ಇವರು ತಮ್ಮಗಳ ಜೇಷ್ಠತೆಯನ್ನು ನಿಗದಿಪಡಿಸಿರುವುದಾಗಿ ತಿಳಿಸುತ್ತಾ ಅದರಂತೆ ತಮ್ಮಗಳ ಜೇಷ್ಠತೆಯನ್ನು ನಿಗದಿಪಡಿಸುವಂತೆ ಕೋರಿರುತ್ತಾರೆ. | |
| 7. | 9 | ಧನರಾಜ್, ಸಹಾಯಕ ಇಂಜಿನಿಯರ್- II | | |

| | | | | |
|---|---|---|---|---|
| | | | | ಅದೇ ರೀತಿ ಶ್ರೀ ಧನರಾಜ್ ಮತ್ತು ಪೀರಾಜಿ, ಇವರುಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ಸದರಿಯವರುಗಳ ಜೇಷ್ಠತೆಯನ್ನು ಕ್ರಮವಾಗಿ ಜೇ.ಕ್ರ.ಸಂ:11ರಲ್ಲಿ ಹಾಗೂ ಬಸವರಾಜಯ್ಯ ಹಿರೇಮಠ - ಜೇ.ಕ್ರ.ಸಂ.15ರಲ್ಲಿ ನಿಗಧಿಪಡಿಸಿದೆ. |
| 8. | | ಸಿ. ಮಂಜ್ಯಾನಾಯ್ಕ, ಸಹಾಯಕ ಇಂಜಿನಿಯರ್- II | ತಾವು ಲೋಕೋಪಯೋಗಿ ಇಲಾಖೆಯಿಂದ ಪಂ.ರಾ.ಇಂ. ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಾತಿ ಹೊಂದಿದ ಆದೇಶದಲ್ಲಿ ಕಿರಿಯ ಇಂಜಿನಿಯರ್ ಪಟ್ಟಿಯಲ್ಲಿ ತಮ್ಮ ಹೆಸರಿದ್ದು, ತಾವು ಈಗಾಗಲೇ ಸಹಾಯಕ ಇಂಜಿನಿಯರ್, ವಿಭಾಗ-2ಗೆ ಪದೋನ್ನತಿ ಹೊಂದಿರುವುದ ರಿಂದ ಹಾಗೂ ತಾವು ಹಿಂದೆ ಸಲ್ಲಿಸಿದ ಮನವಿಯಂತೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಸಹಾಯಕ ಇಂಜಿನಿಯರ್, ವಿಭಾಗ-2ರ ಜೇಷ್ಠತಾ ಪಟ್ಟಿಯಲ್ಲಿ ತಮ್ಮ ಜೇಷ್ಠತೆ ಯನ್ನು ನಿಗದಿಪಡಿಸುವಂತೆ ಕೋರಿ ತತ್ಸಂಬಂಧದ ದಾಖಲೆಗಳನ್ನು ಸಲ್ಲಿಸಿರುತ್ತಾರೆ. | ಲೋಕೋಪಯೋಗಿ ಇಲಾಖೆಯು ನೀಡಿದ ಸಹಮತಿ ಹಾಗೂ ಮಾಹಿತಿಯನ್ನು ಆಧರಿಸಿ ದಿನಾಂಕ: 08.12.2020 ರ ಆದೇಶದಲ್ಲಿ ಕಿರಿಯ ಇಂಜಿನಿಯರ್ ವೃಂದದಲ್ಲಿ ಶಾಶ್ವತವಾಗಿ ವಿಲೀನಾತಿಗೊಳಿಸಲಾಗಿತ್ತು. ತದನಂತರ ಸದರಿಯವರು ಸಲ್ಲಿಸಿದ ದಾಖಲೆಗಳನ್ನು ಆಧರಿಸಿ ಅವರ ಹೆಸರನ್ನು ದಿ:22.09.2021ರ ತಿದ್ದುಪಡಿಯಲ್ಲಿ ಕಿರಿಯ ಇಂಜಿನಿಯರ್ ವೃಂದದಿಂದ ಕೈಬಿಟ್ಟು ಸಹಾಯಕ ಇಂಜಿನಿಯರ್ ವಿಭಾಗ-2 ವೃಂದದಲ್ಲಿ ಸೇರ್ಪಡೆಗೊಳಿಸ ಲಾಗಿರುತ್ತದೆ.<br><br>ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು ಇವರು ದಿ:22.08.2021ರಲ್ಲಿ ಸಹಾಯಕ ಇಂಜಿನಿಯರ್ ವಿಭಾಗ-2 ರಲ್ಲಿ ನೀಡಿರುವ ಜೇಷ್ಠತೆ ಹಾಗೂ ಸದರಿಯವರುಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ಸದರಿಯವರುಗಳ ಜೇಷ್ಠತೆಯನ್ನು ಜೇಷ್ಠತಾ ಕ್ರಮ ಸಂಖ್ಯೆ:14 ರಲ್ಲಿ ನಿಗದಿಪಡಿಸಲಾಗಿದೆ |
| 9. | | ಮಲ್ಲಿಕಾರ್ಜುನ ಬಿರಾದಾರ, ಸಹಾಯಕ ಇಂಜಿನಿಯರ್- II | ತಾವು ದಿನಾಂಕ:07.09.2021 ರಲ್ಲಿ ಪ್ರಕಟಿಸಲಾದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಯಲ್ಲಿ ತಮ್ಮ ಜೇಷ್ಠತೆಯನ್ನು ಕ್ರ.ಸಂ. 07 ರಲ್ಲಿ ನಿಗದಿ ಪಡಿಸಿದ್ದು, ಸದರಿ ಪಟ್ಟಿಯಲ್ಲಿ ತಮ್ಮ | ಸರ್ಕಾರವು ದಿ:29.01.2021ರಂದು ಹೊರಡಿಸಿದ ಸುತ್ತೋಲೆಯಲ್ಲಿ ಸ್ಥಳೀಯ ವೃಂದಕ್ಕೆ ಸೇರ್ಪಡೆ ಮಾಡಲು ಇಚ್ಛಾ ಪತ್ರಗಳನ್ನು ಸಲ್ಲಿಸಲು ಒಂದು ಬಾರಿ ಮಾತ್ರ ಅವಕಾಶವಿದ್ದು, |

| | | | | |
|---|---|---|---|---|
| | | | ಹೆಸರನ್ನು ಕೈಬಿಟ್ಟು ಮಿಕ್ಕುಳಿಕೆ ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ತಮ್ಮ ಜೇಷ್ಠತೆಯನ್ನು ನಿಗದಿಪಡಿಸುವಂತೆ ಕೋರಿರುತ್ತಾರೆ. | ಇದೊಂದು ಬದಲಾವಣೆ ಮಾಡಲಾಗದ ಇಚ್ಛಾ ಪತ್ರವಾಗಿರುತ್ತದೆ. ಹಾಗಾಗಿ ಸದರಿ ಕೋರಿಕೆಯ ಅನುಸಾರ ಇವರ ಹೆಸರನ್ನು ಸ್ಥಳೀಯ ವೃಂದದಿಂದ ಮಿಕ್ಕುಳಿಕೆ ವೃಂದಕ್ಕೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಇವರ ಹೆಸರನ್ನು ಸ್ಥಳೀಯ ವೃಂದದಲ್ಲಿಯೇ ಮುಂದುವರೆಸಲಾಗಿದೆ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ. ನದೀಮ್ 20/11

**(ಕೆ. ನದೀಮ್ ಅಹ್ಮದ್)**

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

20/11/2021

## **ಅನುಬಂಧ**

**ಅಧಿಸೂಚನೆ ಸಂಖ್ಯೆ ಗ್ರಾಅಪ 17 ಸೇಶಿಕಾ 2021 (2) ದಿನಾಂಕ:20.11.2021 ಕ್ಕೆ**

ದಿನಾಂಕ: 10.08.2021 ರಲ್ಲಿದ್ದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಲ್ಯಾಣ – ಕರ್ನಾಟಕ ಸ್ಥಳೀಯ ವೃಂದದ ಸಹಾಯಕ ಇಂಜಿನಿಯರ್- II ಗಳ ಅಂತಿಮ ಜೇಷ್ಠತಾ ಪಟ್ಟಿ.

| ಕ್ರಮ ಸಂಖ್ಯೆ | ಜೇಷ್ಠತಾ ಪಟ್ಟಿಯ ಕ್ರ.ಸಂ. | ಹೆಸರು | ಪ.ಜಾತಿ / ಪ.ಪಂಗಡ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ/ ಪದೋನ್ನತಿ ಹೊಂದಿದ ದಿನಾಂಕ | ಸಕ್ರಮಾತಿ ಹೊಂದಿದ ದಿನಾಂಕ / ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|
| 1. | 3714 | ಕೆ.ರಾಜೇಶ್ | | 05.01.1965 | 28.07.2004 | 09.07.2009 | |
| 2. | 4177 | ಮೊಹಮ್ಮದ್ ಕಲೀಮುದ್ದೀನ್ | | 30.12.1966 | 16.10.1996 | 07.02.2011 | |
| 3. | 4243 | ಎಲ್.ಗೋಪಾಲನಾಯ್ಕ | ಎಸ್. ಸಿ | 01.06.1968 | 20.03.2012 | 07.02.2011 | |
| 4. | 4256 | ಸುಭಾಷ್ | ಎಸ್. ಸಿ | 20.05.1967 | 07.02.2011 | 07.02.2011 | |
| 5. | 4334 | ಬಸವಂತಪ್ಪ ಬಂಡೆಪ್ಪಾ ಗಂದಗೆ | | 01.06.1963 | 20.03.2012 | 20.03.2012 | |
| 6. | 4381 | ಶಿವಬಸಪ್ಪ ಕಾಳಶೆಟ್ಟಿ | | 01.07.1966 | 07.02.2011 | 20.03.2012 | |
| 7. | 4389 | ಹನುಮಪ್ಪ ಅಡವಣಿ | ಎಸ್.ಸಿ. | 20.07.1973 | 02.03.2020 | 20.03.2012 | |

| | | | | | | | |
|---|---|---|---|---|---|---|---|
| 8. | 4419 | ಬಸವರಾಜಯ್ಯ ಹಿರೇಮಠ | ಎಸ್.ಸಿ. | 16.08.1967 | 20.12.2016 | 20.03.2012 | |
| 9. | 4453 | ಖತಾಲ ಹುಸೇನ್ | | 01.06.1964 | 07.02.2011 | 20.12.2016 | |
| 10. | 4468 | ಮಲ್ಲಿಕಾರ್ಜುನ ಬಿರಾದರ | | 01.06.1969 | 07.02.2011 | 22.12.2016 | |
| 11. | 4515 | ಧನರಾಜ | | 01.06.1970 | 02.03.2020 | 18.05.2018 | |
| 12. | | ಅಬ್ದುಲ್ ಅಜೀಜ್ | | 01.06.1963 | 29.03.1989 | 04.10.2019 | |
| 13. | | ಎಂ.ಎ.ಅಜೀಮ್ | | 10.05.1964 | 21.0.1989 | 04.10.2019 | |
| 14. | 4860 | ಮಂಜ್ಯಾನಾಯ್ಕ | ಎಸ್.ಸಿ. | 01.03.1970 | 06.11.2019 | 02.03.2020 | |
| 15. | 4920 | ಪೀರಾಜಿ | ಎಸ್.ಟಿ | 01.06.1967 | 06.11.2019 | 02.03.2020 | mech |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

20/11

(ಕೆ.ನದೀಮ್ ಅಹ್ಮದ್)

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.